ಪ್ರಶ್ನೆ ಸಂಖ್ಯೆ: 278 (3600)

ಶ್ರೀ ಸುಧಾಕರಲಾಲ್ ಪಿ.ಆರ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಉತ್ತರದಲ್ಲಿ ಕೊಟರಗೆರೆಯಲ್ಲಿರತಕ್ಕಂಥದ್ದು 100 ಹಾಸಿಗೆಗಳ ಆಸ್ಪತ್ರೆ ಎಂದು ಹೇಳುತ್ತಾರೆ. ಆದರೆ ಅದು 70–80 bedded hospital ಇರಬಹುದು. ಒಂದು ತಾಲ್ಲೂಕಿನಲ್ಲಿ 100 ಹಾಸಿಗೆಗಳ ಆಸ್ಪತ್ರೆ ಇರಬೇಕೆಂದು ಹೇಳಿದರೆ, 10 ಎಕರೆ ಜಾಗ ಬೇಕು ಎಂದು ಸರ್ಕಾರಿ ಆದೇಶದಲ್ಲಿ ಇದೆ. ಆದರೆ ಅಲ್ಲಿರತಕ್ಕಂಥದ್ದು. . . .

ಅಧ್ಯಕ್ಷರು: ನೀವು ಇರುವ ವಿಚಾರವನ್ನು ಕೇಳಿ.

ಶ್ರೀ ಪಿ.ಆರ್. ಸುಧಾಕರ್‌ಲಾಲ್: ನೂರು ಹಾಸಿಗೆಗಳ ಆಸ್ಪತ್ರೆ ಇದೆ ಎಂದು ಹೇಳಿದ್ದಾರೆ. ಅದು ತಪ್ಪು. ಅಲ್ಲಿ ಇರುವಂಥದ್ದು ಕೇವಲ 80 ಹಾಸಿಗೆಗಳ ಆಸ್ಪತ್ರೆ ಎಂದು ನಾನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. ನಮ್ಮ ಕಡೆ ambulance ಕೆಟ್ಟು ಹೋಗಿ ನಾಲ್ಕು ತಿಂಗಳು ಆಯಿತು. ನಾನು ಮಾನ್ಯ ಸಚಿವರಿಗೆ ಪತ್ರ ಬರೆದೆ. Health Commissioner ರವರಿಗೂ ಕೂಡ personally ಹೋಗಿ ಪತ್ರ ಕೊಟ್ಟೆ. ಆದರೆ ಇವತ್ತಿನವರೆಗೂ ಕೂಡ ಸರ್ಕಾರಕ್ಕೆ ಒಂದು ambulance ರಿಪೇರಿ ಮಾಡಿಸುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ? ನಮ್ಮ ಜನರು ಏನು ಆಗಬೇಕು? ಸಚಿವರು ಕೊಟ್ಟಿರುವ ಉತ್ತರದಲ್ಲಿ, ಮಧುಗಿರಿ ತಾಲ್ಲೂಕಿನ ಒಂದು ambulance ಅನ್ನು ತಾತ್ಕಾಲಿಕವಾಗಿ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ನಾನು ಅಲ್ಲಿನ ಡಾಕ್ಟರ್ಸ್ ಜೊತೆ ಮಾತನಾಡಿದರೆ ಅವರು, 'ಸಾರ್ ಅಲ್ಲಿ ಒಂದು ವರ್ಷದಿಂದ ನಿಂತಿರುವ ambulance ಅನ್ನು ತಂದು ಕೊರಟಗೆರೆಗೆ ಕೊಡುತ್ತಿದ್ದಾರೆ' ಎಂದು ಹೇಳುತ್ತಾರೆ. ಈ ಕಡೆ ತೋವಿನಕೆರೆ ಎನ್ನುವ ಒಂದು ಹೋಬಳಿಯಲ್ಲಿ 108 ಸಂಖ್ಯೆಯ ambulance ರೋಗಿಗಳನ್ನು ಕರೆದುಕೊಂಡು ಹೋಗುವಂತಹ ಸಂದರ್ಭದಲ್ಲಿ ದಾರಿಯಲ್ಲಿಯೇ ಕೆಟ್ಟು ನಿಂತು ಹೋಗುತ್ತದೆ. ಅವರು ಮತ್ತೆ ಬೇರೆ vehicle ಗಳನ್ನು ತಂದು ಆ ರೋಗಿಗಳನ್ನು ಕರೆದುಕೊಂಡು ಹೋಗುವಂತಹ ಪರಿಸ್ಥಿತಿ ನಮ್ಮಲ್ಲಿದೆ. ಹಾಗಾಗಿ ಆರೋಗ್ಯ ಇಲಾಖೆ ಏನಿದೆ,

ಅದು ಸಂಪೂರ್ಣವಾಗಿ ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಕೆಲಸ ಮಾಡುವಂತೆ . . .

ಅಧ್ಯಕ್ಷರು: ಸ್ವಾಮಿ ಇದು ಭಾಷಣ ಅಲ್ಲ. ಪ್ರಶ್ನೆ ಕೇಳಿ.

ಶ್ರೀ ಪಿ.ಆರ್. ಸುಧಾಕರ್‌ಲಾಲ್: ಆಯಿತು ಸಾರ್, ಕೇಳಿದ್ದೇನೆ.

ಅಧ್ಯಕ್ಷರು: ಯಾವ ಪ್ರಶ್ನೆ?

ಶ್ರೀ ಪಿ.ಆರ್. ಸುಧಾಕರ್‌ಲಾಲ್: Ambulance ಕೇಳಿದ್ದೇನೆ. 100 ಹಾಸಿಗೆಗಳ ಆಸ್ಪತ್ರೆ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಲಿ.

ಡಾ॥ ಶರಣಪ್ರಕಾಶ ರುದ್ರಪ್ಪ ಪಾಟೀಲ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು) (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಗಮನಕ್ಕೆ ತಂದಿದ್ದಾರೆ. Ambulance ಅನ್ನು ಅತೀ ಶೀಘ್ರದಲ್ಲಿಯೇ ರಿಪೇರಿ ಮಾಡಿಸಿ ಕೊಡುವಂತಹ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು: ಶೀಘ್ರ ಎಂದರೆ dictionary ಯಲ್ಲಿ ಇಲ್ಲ.

ಶ್ರೀ ಪಿ.ಆರ್. ಸುಧಾಕರ್‌ಲಾಲ್: ನಾಲ್ಕು ತಿಂಗಳ ಹಿಂದಿನಿಂದಲೂ ನಾವು ಪತ್ರಗಳನ್ನು ಬರೆದರೂ ಕೂಡ ಸರ್ಕಾರ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ ಏನು ಮಾಡುವುದು?

ಅಧ್ಯಕ್ಷರು: ಏನು ಮಾಡುವುದು ಎಂದರೆ, ಸರ್ಕಾರ ಅಂದರೆ ಅದೇ.

ಶ್ರೀ ಪಿ.ಆರ್. ಸುಧಾಕರಲಾಲ್: ಮಾನ್ಯ ಅಧ್ಯಕ್ಷರೆ, ನಾವು ಅಂದುಕೊಂಡಿರುವುದು ಅವರ ಜವಾಬ್ದಾರಿ, ಅವರೇ ಏನು review ಮಾಡುತ್ತಾರೆ, ಆ ಸಂದರ್ಭದಲ್ಲಿ ನೋಡಿ ಅವರು ಸರಿ ಮಾಡಬೇಕು. ನಾವು ಅವರಿಗೆ ಹೇಳಿದರೂ ಕೂಡ ಮಾಡಲಿಲ್ಲವೆಂದರೆ ಏನರ್ಥ?

ಅಧ್ಯಕ್ಷರು: ಆಯಿತು, ಬೇಗ ಮಾಡಿಕೊಡಿ. ಡಾ॥ ಉಮೇಶ್ ಜಿ. ಜಾಧವ್‌ರವರು ಮಾತನಾಡುವುದು.